ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 16-03-2021 ಪ್ರಶ್ನೆ ಸಂಖ್ಯೆ : 1161 (1207)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯಸಂಸ್ಥೆಗಳಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 16-03-2021

ಉತ್ತರಿಸುವ ಸಚಿವರು: ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು

ವಿಷಯ : ಅಕ್ರಮ ಮರಳು ಸಾಕಾಣಿಕೆ ಕುರಿತು

(ಅ) ಕಾರವಾರ ಜಿಲ್ಲೆಯಲ್ಲಿ ಗುರುತಿಸಲಾಗಿರುವ ಮರಳು ನಿಕ್ಷೇಪಗಳು ಎಷ್ಟು ; ಇವುಗಳಲ್ಲಿ ಎಷ್ಟು ಮರಳು ನಿಕ್ಷೇಪಗಳನ್ನು ಹರಾಜು ಮುಖಾಂತರ ವಿಲೇವಾರಿ ಮಾಡಲಾಗಿದೆ ; ಹರಾಜಿನಲ್ಲಿ ಇವುಗಳನ್ನು ಪಡೆದ ಗುತ್ತಿಗೆದಾರರು ಯಾರು ; (ಕಳೆದ 3 ವರ್ಷಗಳ ನಿಕ್ಷೇಪವಾರು ಮಾಹಿತಿ ನೀಡುವುದು)

(ಆ) ಕಾರವಾರ ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮ ಮರಳು ದಾಸ್ತಾನು ಪ್ರಕರಣಗಳು ಬೆಳಕಿಗೆ ಬಂದಿವೆಯೇ ; ಬಂದಿದ್ದಲ್ಲಿ, ಎಷ್ಟು ಪ್ರಮಾಣದ ಮರಳನ್ನು ಅಕ್ರಮವಾಗಿ ಸಂಗ್ರಹಿಸಲಾಗಿತ್ತು ; ಸಂಗ್ರಹಿಸಿದವರು ಯಾರು ; ಇದಕ್ಕೆ ವಿಧಿಸಿರುವ ದಂಡವೆಷ್ಟು ; (ಕಳೆದ 3 ವರ್ಷಗಳ ಪ್ರಕರಣಗಳವಾರು ಮಾಹಿತಿ ನೀಡುವುದು)

(ಇ) ಕಾರವಾರ ಜಿಲ್ಲೆಯಲ್ಲಿ ಅಕ್ರಮ ಮರಳು ದಾಸ್ತಾನುದಾರರ ವಿರುದ್ಧ ಮತ್ತು ಅಕ್ರಮ ಮರಳು ದಾಸ್ತಾನು ಮಾಡದಂತೆ ತಡೆಯಲು ವಿಫಲವಾಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; (ಪ್ರಕರಣವಾರು ಮಾಹಿತಿ ನೀಡುವುದು) ಅಕ್ರಮ ಮರಳು ದಾಸ್ತಾನು ಮಾಡುವುದನ್ನು ತಡೆಗಟ್ಟಲು ಸರ್ಕಾರವು ವಹಿಸಿರುವ ಮುಂಜಾಗ್ರತಾ ಕ್ರಮಗಳೇನು ? (ವಿವರ ನೀಡುವುದು)